**<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ</u>**
**<u>ಸಿ.ಸಿ.569/2024</u>**

| | | |
|---|---|---|
| ಸಾಕ್ಷಿದಾರರ ಹೆಸರು | : ಕಿಶೋರ್ ಕುಮಾರ್ | ಫ್ರಾಸಾ-2 |
| ತಂದೆಯ ಹೆಸರು | : ಬಾಲಸುಬ್ರಮಣ್ಯ | ಚಾಸಾ-2 |
| ವಯಸ್ಸು | : 37 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಫಾರೆಸ್ಟ್ ಗಾರ್ಡ್ | ದಿನಾಂಕಃ29.12.2025 |
| ವಾಸಸ್ಥಳ | : ದೊಡ್ಡಮಾಗರವಳ್ಳಿ ಬೀಟ್, ಆಲ್ದೂರು | |

**<u>:ಮುಖ್ಯ ವಿಚಾರಣೆ: ಫ್ರಾಜ್ಞ್ಯಾ.ಸ.ಸ.ಅ. ರವರಿಂದ:</u>**

ನಾನು ದಿ.05.08.2021 ಇಲ್ಲಿಯವರೆಗೂ ಆಲ್ದೂರು ಅರಣ್ಯ ವಲಯದ ದೊಡ್ಡಮಾಗರವಳ್ಳಿ ಬೀಟ್ ನ ಫಾರೆಸ್ಟ್ ಗಾರ್ಡ್ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ಸಾಕ್ಷಿಯು ನಿಪಿ-3 ಮತ್ತು 4 ರ ಮಹಜರ್ ಗಳಲ್ಲಿ ತಮ್ಮ ಸಹಿಗಳನ್ನು ಗುರುತಿಸಿ, ನಿಪಿ-5 ರಿಂದ 9 ಮತ್ತು ನಿಪಿ-10 ಮತ್ತು 11 ರ ಫೋಟೋಗಳಲ್ಲಿ ತಾವು ಇರುವ ಬಗ್ಗೆ ಗುರುತಿಸುತ್ತಾರೆ. ಮಹಜರ್ ಗಳಲ್ಲಿನ ಸಾಕ್ಷಿಯ ಸಹಿಗಳನ್ನು ನಿಪಿ-3(ಬಿ) ಮತ್ತು 4(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಎಂ.ಒ.1 ರಿಂದ 10 ರ ಮೇಲೆ ತಮ್ಮ ಸಹಿಗಳನ್ನು ಗುರುತಿಸಿದ್ದು, ಅವುಗಳನ್ನು ಎಂ.ಒ.1(ಬಿ) ರಿಂದ 10(ಬಿ) ಎಂದು ಗುರುತಿಸಲಾಯಿತು.

ದಿ.22.11.2022 ರಂದು ಮಧ್ಯಾಹ್ನ ಸುಮಾರು 12.30 ರ ಸಮಯಕ್ಕೆ ಚಾಸಾ-21 ರವರು ನನಗೆ ಕರೆ ಮಾಡಿ ಮೂಡಿಗೆರೆ ಪೋಲಿಸರು ಪಂಚರರನ್ನು ಕಳುಹಿಸುವಂತೆ ಕೋರಿಕೊಂಡಿದ್ದು ಅದರಂತೆ ನಾನು ಮತ್ತು ಚಾಸಾ-3 ರವರು ಪಂಚರಾಗಿ ಹೋಗುವಂತೆ ತಿಳಿಸಿದ್ದರು. ಅದರಂತೆ ಸ.4.35 ರ ಸಮಯಕ್ಕೆ ನಾನು ಮತ್ತು ಚಾಸಾ-3 ರವರು ಎಸ್ಟೇಟ್ ಕುಂದೂರಿಗೆ ಹೋಗಿ ಪೋಲಿಸರಿಂದ ನೋಟೀಸು ಪಡೆದು APC ಕ್ಯಾಂಪ್ ಬಳಿ ಚಾಸಾ-1 ರವರು ಸ್ಥಳ ತೋರಿಸಿದಂತೆ ಸ.4.35 ರಿಂದ 6.05 ರವರೆಗೂ ಮಹಜರ್ ಬರೆದು ಎಂ.ಒ.1 ರಿಂದ 7 ರ ವಸ್ತುಗಳನ್ನು ವಶಕ್ಕೆ ಪಡೆದರು. ಅದಾದ ನಂತರ ಮೂಡಿಗೆರೆ-ಕುಂದೂರು ರಸ್ತೆಯ ಮಧ್ಯದಲ್ಲಿ ರಘು ಮತ್ತು ರವಿ ರವರ ಎಸ್ಟೇಟ್ ಹತ್ತಿರ ಸ.6.20 ರಿಂದ 7.20 ರವರೆಗೂ ಮಹಜರ್ ಬರೆದು ಅಲ್ಲೇ ಬಿದಿದ್ದ ಎಂ.ಒ.8 ರಿಂದ 10 ರ ವಸ್ತುಗಳನ್ನು ವಶಕ್ಕೆ ಪಡೆದರು. ಆ ಮಹಜರ್ ಕಾಲಕ್ಕೆ ಚಾಸಾ-1 ರವರು ಸ್ಥಳ ತೋರಿಸಿದ್ದರು.

**<u>ಪಾಟೀ ಸವಾಲು: 1, 2, 4 ರಿಂದ 6, 8, 13, 14, 16, 17, 20 ಮತ್ತು 21 ನೇ ಆರೋಪಿತರ ಪರ ಶ್ರೀ ಎಂ.ವಿ.ಜೆ. ವಕೀಲರಿಂದ:</u>**

ಪೋಲಿಸರಿಂದ ನೋಟೀಸು ಪಡೆದಾಗ ಸ.4.35 ರ ಸಮಯವಾಗಿತ್ತು. ಪೋಲಿಸರು ನನ್ನನ್ನು ಮತ್ತು ಚಾಸಾ-3 ರವರನ್ನೇ ಪಂಚರನ್ನಾಗಿ ಕಳುಹಿಸಿಕೊಡುವಂತೆ ಕೇಳಿರಲಿಲ್ಲ. ನಾವು ಸ್ಥಳಕ್ಕೆ ಹೋಗುವ ಮುನ್ನ ಪೋಲಿಸರು ನೋಟೀಸನ್ನು ಬರೆದಿಟ್ಟುಕೊಂಡು ನಾವು ಸ್ಥಳಕ್ಕೆ ಹೋದ ನಂತರ ಅದನ್ನು ನಮಗೆ

ಕೊಟ್ಟರು. ನಮಗೆ ನೋಟೀಸು ಕೊಟ್ಟ ಸ್ಥಳದ ಪೂರ್ವಕ್ಕೆ ರವಿಗೌಡ ರವರ ಗದ್ದೆ, ಪಶ್ಚಿಮಕ್ಕೆ ರಸ್ತೆ, ಉತ್ತರಕ್ಕೆ ಸಾರಗೋಡು ಮೀಸಲು ಅರಣ್ಯ ಮತ್ತು ದಕ್ಷಿಣಕ್ಕೆ ರಸ್ತೆ ಮತ್ತು ರವಿರವರ ಗದ್ದೆ ಇತ್ತು. ಇದೇ ಚೆಕ್ಕುಬಂದಿಯಲ್ಲಿ ಮಹಜರ್ ಬರೆದಿದ್ದಾರೆ. ಮಹಜರ್ ನಲ್ಲಿ ತಪ್ಪು ವಿವರ ನಮೂದಿಸಿದ್ದರೆ ಅದನ್ನು ನಾನು ಸರಿಪಡಿಸಲು ಹೇಳುತ್ತಿದ್ದೆ. ನಿಪಿ-3 ರಲ್ಲಿ ನಮೂದಿಸಿರುವ ಚೆಕ್ಕುಬಂದಿಗೂ ನಾನು ಮೇಲೆ ಹೇಳಿದ ಚೆಕ್ಕುಬಂದಿಗೂ ವ್ಯತ್ಯಾಸ ಇದೆ ಎಂದರೆ ಸರಿ. ಸ.4.40 ರ ಸಮಯಕ್ಕೆ ಮಹಜರ್ ಬರೆಯಲು ಪ್ರಾರಂಭಿಸಿದ್ದರು. ನಾನು ಸಹಿ ಮಾಡಿರುವ ಮಹಜರ್ ನಲ್ಲಿ ಅದನ್ನು ಬರೆಯಲು ಶುರುಮಾಡಿದ ಸಮಯವನ್ನು ಸ.4.35 ಎಂದೇ ಬರೆದಿದ್ದಾರೆ. ಶಿಬಿರ ಕಟ್ಟಡದ ಬಳಿ ಬರೆದ ಮಹಜರ್ ನ್ನು ನಾಲ್ಕು ಪುಟಗಳಲ್ಲಿ ಬರೆಯಲಾಗಿದೆ. ಮಹಜರ್ ನ ಎಲ್ಲಾ ಪುಟಗಳಲ್ಲೂ ಸಹಾ ನಾನು ಸಹಿ ಮಾಡಿಲ್ಲ. ಮಹಜರ್ ನ ನಾಲ್ಕನೇ ಪುಟದ ಕೆಳಭಾಗದಲ್ಲಿ ನಾನು ಸಹಿ ಮಾಡಿದ್ದೆ. ನಿಪಿ-3 ರ 4 ನೇ ಪುಟದಲ್ಲಿ ನನ್ನ ಸಹಿ ಇಲ್ಲ ಎಂದರೆ ಸರಿ.

ಮಹಜರ್ ಬರೆಯುವಾಗ 4-5 ಜನ ಪೋಲಿಸರು ಇದ್ದರು. ಆ ಎಲ್ಲಾ ಪೋಲಿಸರು ಮಹಜರ್ ಗೆ ಸಹಿ ಮಾಡಿದ್ದಾರ ಎಂದು ನಾನು ನೋಡಿಲ್ಲ. ಪೋಲಿಸರು ವಶಕ್ಕೆ ಪಡೆದರು ಎಂದು ಹೇಳಲಾದ ಚೇರ್ ಗಳ ಫೋಟೋ ತೆಗೆದಿದ್ದಾರೆ. ನಿಪಿ-5 ರಲ್ಲಿ ಕೇವಲ ಎರಡು ಚೇರ್ ಗಳು ಕಾಣುತ್ತಿವೆ ಎಂದರೆ ಸರಿ. ಆನೆ ದಾಳಿಯಿಂದ ಯಾರಾದರು ಮೃತಪಟ್ಟರೆ ಆ ಸ್ಥಳಕ್ಕೆ ಹೋದಾಗ ನಾವು ತಾಳ್ಮೆಯಿಂದ ವರ್ತಿಸಬೇಕು ಎಂದರೆ ಸರಿ. ಯಾರಾದರು ಅಸಹಜವಾಗಿ ಸಾವನ್ನಪ್ಪಿದರೆ ಅವರ ಕುಟುಂಬದವರು ತಾಳ್ಮೆ ಕಳೆದುಕೊಂಡಿರುತ್ತಾರೆ ಎಂದರೆ ಸರಿ. ಕಾಡುಪ್ರಾಣಿ ದಾಳಿಯಿಂದ ಯಾರಾದರು ಸಾವಿಗೀಡಾಗಿದ್ದರೆ ಆ ಸ್ಥಳಕ್ಕೆ ನಾವು ಹೋಗುವ ಮುನ್ನ ಪೋಲಿಸರಿಗೆ ವಿಚಾರ ತಿಳಿಸಿ ಕರೆದುಕೊಂಡು ಹೋಗುತ್ತೇವೆ ಎಂದರೆ ಸರಿ. ಇಲಾಖಾ ವತಿಯಿಂದ ನಮಗೆ ಆಯುಧ ಕೊಟ್ಟಿರುತ್ತಾರೆ ಎಂದರೆ ಸರಿ. ನಾನು ಸಹಿ ಮಾಡಿರುವ ಮಹಜರ್ ಗಳಿಗೆ ಒಟ್ಟು ಎಷ್ಟು ಜನ ಸಹಿ ಮಾಡಿದ್ದಾರೆ ಎಂದು ನನ್ನಿಂದ ಹೇಳಲು ಆಗುವುದಿಲ್ಲ. ಸ್ಥಳದಲ್ಲಿ ವಶಕ್ಕೆ ಪಡೆಯಲಾಯಿತು ಎಂದು ಹೇಳಲಾದ ವಸ್ತುಗಳ ಮೇಲೆ ಮೊಕದ್ದಮೆ ಸಂಖ್ಯೆ ಮತ್ತು ಕ್ರ.ಸಂ.ಯನ್ನು ಬರೆಯಲಾಗಿತ್ತು.

ಮೂರು ಚೇರ್ ಗಳಿಗೆ ಒಟ್ಟಾಗಿ ಕ್ರ.ಸಂ.1 ಎಂದು ನಮೂದಿಸಿದ್ದರು. ಆ ಸಂಖ್ಯೆಯನ್ನು ಕೆಂಪು ಬಣ್ಣದಿಂದ ಬರೆಯಲಾಗಿತ್ತು. ಎಂ.ಒ.1 ರಂತೆ ಗುರುತಾಗಿರುವ ಚೇರ್ ಗಳ ಮೇಲೆ ಕ್ರಮ ಸಂಖ್ಯೆ ಮತ್ತು ಮೊಕದ್ದಮೆ ಸಂಖ್ಯೆ ಕಾಣುತ್ತಿಲ್ಲ ಎಂದರೆ ಸರಿ. ಶಿಬಿರ ಕಟ್ಟಡದಿಂದ ಮಹಿಳೆ ಮೃತಪಟ್ಟ ಸ್ಥಳಕ್ಕೆ ಸುಮಾರು 200-250 ಮೀಟರ್ ಅಂತರ ಇತ್ತು. ರವಿ ಮತ್ತು ರಘು ರವರ ತೋಟದ ಬಳಿ ಇರುವ ಮೂಡಿಗೆರೆ-ಹುಲ್ಲೇಮನೆ ರಸ್ತೆಯ ಬದಿಯಲ್ಲಿ ಶೋಭ ರವರು ಮೃತಪಟ್ಟಿದ್ದರು ಎಂದು ಸ್ಥಳ ತೋರಿಸಿದ್ದರು. ನಿಪಿ-4 ರಲ್ಲಿ ಶೋಭ ರವರ ಮೃತಪಟ್ಟ ಸ್ಥಳವನ್ನು ರಘುಗೌಡರವರ ತೋಟದ ಒಳಗೆ ತೋರಿಸಿದ್ದಾರೆ ಎಂದರೆ ಸರಿ. ಶೋಭ ರವರು ಮೃತಪಟ್ಟ ಸ್ಥಳದಲ್ಲಿ ಮಹಜರ್ ಬರೆಯಲಾಗಿಲ್ಲ. ಶೋಭ ರವರು ಮೃತಪಟ್ಟ ಸ್ಥಳದ ಚೆಕ್ಕುಬಂದಿ ನನಗೆ ಗೊತ್ತಿಲ್ಲ. ನಿಪಿ-4 ರ ಮಹಜರ್ ಬರೆಯುವಾಗ ಕತ್ತಲಾಗಿತ್ತು ಎಂದರೆ ಸರಿ. ಟಾರ್ಚ್ ಲೈಟ್ ನ ಸಹಾಯದಿಂದ ಮಹಜರ್ ಬರೆಯಲಾಗಿದೆ ಎಂದು ನಿಪಿ-4 ರಲ್ಲಿ ನಮೂದಿಸಲಾಗಿದೆ. ನಿಪಿ-4 ರಲ್ಲಿ ಇಲಾಖಾ ಜೀಪ್ ನ ಲೈಟ್ ಮತ್ತು ಮೊಬೈಲ್ ಟಾರ್ಚ್ ನ

ಸಹಾಯದಿಂದ ಮಹಜರ್ ಬರೆಯಲಾಗಿದೆ ಎಂದರೆ ಸರಿ. ಟಾರ್ಚ್ ನಲ್ಲಿ ಹಲವು ವಿಧ ಇದೆ ಎಂದರೆ ಸರಿ.

2 ನೇ ಬಾರಿ ಬರೆದ ಮಹಜರ್ ನ್ನು ಒಟ್ಟು ಎಷ್ಟು ಪುಟಗಳಲ್ಲಿ ಬರೆಯಲಾಗಿತ್ತು ಎಂದು ಹಾಗೂ ಅದಕ್ಕೆ ಒಟ್ಟು ಎಷ್ಟು ಜನ ಸಹಿ ಮಾಡಿದ್ದಾರೆ ಎಂದು ನನ್ನಿಂದ ಹೇಳಲಾಗುವುದಿಲ್ಲ. ನಾನು ಗುರುತಿಸಿರುವ ಮಹಜರ್ ಗಳಿಗೆ ನಮ್ಮ ಕಚೇರಿಯಲ್ಲಿಯೇ ನಮ್ಮ ಸಹಿ ಪಡೆದಿದ್ದಾರೆ ಎಂದರೆ ಸರಿಯಲ್ಲ. ಇಲಾಖಾ ಸಿಬ್ಬಂದಿಗಳಿಗೆ ಸಹಾಯವಾಗಲಿ ಎಂದು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರಿಗೂ, ಈ ಪ್ರಕರಣಕ್ಕೂ, ಮುದ್ದೆಮಾಲುಗಳಿಗೂ ಒಂದಕ್ಕೊಂದು ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

**ಪಾಟೀ ಸವಾಲು: ಉಳಿದ ಆರೋಪಿತರ ಪರ ವಕೀಲರು 1, 2, 4 ರಿಂದ 6, 8, 13, 14, 16, 17, 20 ಮತ್ತು 21 ನೇ ಆರೋಪಿತರ ಪರ ಆದ ಪಾಟೀ ಸವಾಲನ್ನೇ ಅಳವಡಿಸಿಕೊಳ್ಳುವುದಾಗಿ ತಿಳಿಸಿರುತ್ತಾರೆ.**

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.